**ಸಿ.ಡಬ್ಲೂ.-7 / ಪಿ.ಡಬ್ಲೂ-8**

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು, ಮೈಸೂರು ಜಿಲ್ಲೆ .**

**ಸಿ.ಸಿ.ನಂ. 1747/2014**

| | | |
|---|---|---|
| ಸಾಕ್ಷಿದಾರರ ಹೆಸರು | : | ಜಯಪ್ರಸಾದ್ |
| ತಂದೆಯ ಹೆಸರು | : | ಈಶ್ವರಪ್ಪಯ್ಯ |
| ವಯಸ್ಸು | : | 69 ವರ್ಷ |
| ಉದ್ಯೋಗ | : | ನಿವೃತ್ತ ಉಪ-ವಲಯ ಅರಣ್ಯಾಧಿಕಾರಿಗಳು |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 17.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2010 ರಿಂದ 2015 ರವರೆಗೆ ಹೆಡಿಯಾಲ ಅರಣ್ಯ ವಲಯದಲ್ಲಿ ಉಪ-ವಲಯ ಅರಣ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಚಾಸಾ-1 ಮತ್ತು 2 ನನಗೆ ಪರಿಚಯವಿರುತ್ತಾರೆ.

ಚಾಸಾ-1 ಮತ್ತು 2 ಹೆಡಿಯಾಲ ಅರಣ್ಯ ಉಪ-ವಲಯದಲ್ಲಿ ಅರಣ್ಯ ರಕ್ಷಕ ಮತ್ತು ಅರಣ್ಯ ವೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸದರಿ ಅರಣ್ಯದ ಕಾಳನಮುಂಟಿ ಗಸ್ತಿನಲ್ಲಿ ಮರ ಕಡಿಯುವ ಶಬ್ದ ಕೇಳಿ ಚಾಸಾ-1 ಮತ್ತು 2 ಹೋಗಿ ನೋಡಿದಾಗ ಆರೋಪಿಗಳನ್ನು ಹಿಡಿದುಕೊಂಡಿರುತ್ತಾರೆ. ಆಗ 1 ನೇ ಆರೋಪಿ ತನ್ನ ಕೈಯಲ್ಲಿದ್ದ ಚಾಸಾ-1 ರವರ ಎಡಗೈಗೆ ಹಲ್ಲೆ ಮಾಡಿರುತ್ತಾರೆ. ಆ ಸಂದರ್ಭದಲ್ಲಿ 2 ನೇ ಆರೋಪಿ ಚಾಸಾ-1 ರವರ ಕತ್ತಿನ ಪಟ್ಟಿ ಎಳೆದಾಡಿ ಹೊಡೆದಿರುತ್ತಾರೆಂಬ ವಿಚಾರವನ್ನು ಚಾಸಾ-1 ಮತ್ತು 2 ನನಗೆ ತಿಳಿಸಿರುತ್ತಾರೆ. ಈ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕ 24.05.2014 ರಂದು ಚಾಸಾ-1 ಮತ್ತು 2 ಕಾಳನಮುಂಟಿಯ ಕರಿಕಲ್ಲು ಮುಂಟಿಯಲ್ಲಿ ಗಸ್ತಿಗೆ ಹೋಗಿದ್ದರು ಎಂದರೆ ಸರಿ. ಆಗ ಮಧ್ಯಾಹ್ನ 12.30 ಗಂಟೆಯಾಗಿತ್ತು ಎಂದರೆ ಸರಿ. ಆ ಸಂದರ್ಭದಲ್ಲಿ ಮರ ಕಡಿಯುತ್ತಿದ್ದ ಆರೋಪಿಗಳನ್ನು ಚಾಸಾ-1 ಮತ್ತು 2 ಕೇಳಿ ಅವರನ್ನು ಹಿಡಿದುಕೊಂಡಾಗ 1 ನೇ ಆರೋಪಿ ಮಚ್ಚಿನಿಂದ ಚಾಸಾ-1 ರವರ ಬಲ ಮುಂಗೈಗೆ ಹಲ್ಲೆ ಮಾಡಿರುತ್ತಾರೆಂದು ನನಗೆ ಹೇಳಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ 2 ನೇ ಆರೋಪಿ ಚಾಸಾ-1 ರವರ ಸಮವಸ್ತ್ರವನ್ನು ಹಿಡಿದು ಎಳೆದಾಡಿ ಅವರ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. 2 ನೇ ಆರೋಪಿ ತನ್ನ ಕೈಯಿಂದ ಚಾಸಾ-1 ರವರ ಕೆನ್ನೆಗೆ ಹೊಡೆದಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಆರೋಪಿಗಳು ಯಾವ ರೀತಿ ಈ ಜಾಗದಲ್ಲಿ ತಿರುಗಾಡುತ್ತೀಯಾ ನೋಡುತ್ತೇವೆ, ಕೊಲೆ ಮಾಡದೆ ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿರುತ್ತಾರೆಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂ.ಡಿ.ಸಿ ವಕೀಲರಿಂದಃ**

2014 ರಲ್ಲಿ ನಮ್ಮ ಕಛೇರಿ ಹೆಡಿಯಾಲ ಅರಣ್ಯ ಪ್ರದೇಶದಲ್ಲಿತ್ತು. ಆ ಸಂದರ್ಭದಲ್ಲಿ ನನಗಿಂತ ಕೆಳ ದರ್ಜೆಯ 12 ಸಿಬ್ಬಂದಿಗಳಿದ್ದರು. ಆ ಸಂದರ್ಭದಲ್ಲಿ ನಾಲ್ಕು ಕಳ್ಳಬೇಟೆ ತಡೆ ಶಿಬಿರಗಳನ್ನು ನಿರ್ಮಿಸಿದ್ದೆವು. ನಮ್ಮ ಕಛೇರಿಯಲ್ಲಿ ಯಾವ ಸಿಬ್ಬಂದಿಗಳು ಯಾವ ಗಸ್ತಿಗೆ ಹೋಗುತ್ತಾರೆಂಬ ಬಗ್ಗೆ ಡೈರಿಯಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಸದರಿ

ದಾಖಲೆಗಳನ್ನು ಪೊಲೀಸರಿಗೆ ನೀಡಿಲ್ಲ. ಚಾಸಾ-1 ಮತ್ತು 2 ರವರನ್ನು ಕಾಳನಮುಂಟಿಯ ಕರಿಕಲ್ಲು ಗಸ್ತಿಗೆ ನೇಮಕ ಮಾಡಿದ್ದೆವು ಎಂದು ತೋರಿಸಲು ಪೊಲೀಸರಿಗೆ ನೀಡಿಲ್ಲ. ಕರಿಕಲ್ಲು ಮುಂಟಿಯಿಂದ ನಮ್ಮ ಕಛೇರಿಯಿಂದ ಸುಮಾರು 3 ಕಿ.ಮೀ ದೂರವಿರುತ್ತದೆ. ಸದರಿ ಸ್ಥಳಕ್ಕೆ ಇಲಾಖಾ ಜೀಪ್ ಹೋಗುತ್ತದೆ. ನಮ್ಮ ಹೆಡಿಯಾಲ ಅರಣ್ಯ ವಲಯ ಪ್ರದೇಶಕ್ಕೆ ಸೋಲಾರ್ ತಂತಿ ಬೇಲಿಯನ್ನು ಅಳವಡಿಸಿ ಟ್ರೆಂಚ್ ನಿರ್ಮಿಸಿರುತ್ತೇವೆ. ಸದರಿ ಟ್ರೆಂಚ್ ಸುಮಾರು 10 ಅಡಿ ಆಳವಿರುತ್ತದೆ. ಟ್ರೆಂಚ್ ಇಳಿದು ಹತ್ತಿದ ನಂತರ ಸೋಲಾರ್ ತಂತಿ ಬೇಲಿ ಸಿಗುತ್ತದೆ. ಸೋಲಾರ್ ತಂತಿ ಬೇಲಿ ಇರುವುದರಿಂದ ಹೊರಗಿನ ಪ್ರಾಣಿಗಳಾಗಲಿ ಅಥವಾ ಕಾಡಿನ ಪ್ರಾಣಿಗಳಾಗಲಿ ಹಾಗು ಮನುಷ್ಯರಾಗಲಿ ಒಳಗಡೆ ಮತ್ತು ಹೊರಗಡೆ ಬರಲು ಸಾಧ್ಯವಾಗುವುದಿಲ್ಲವೆಂದರೆ ಕೆಲವು ಕಡೆ ಆನೆಗಳು ಓಡಾಡಿ ಜಾಗ ಮಾಡಿದ ಪ್ರದೇಶದಲ್ಲಿ ಓಡಾಡುತ್ತಾರೆ. ಆನೆಗಳು ಕಂದಕವನ್ನು ದಾಟಿ ಹೊರಗಡೆ ಹೋಗುತ್ತವೆ ಎಂದರೆ ಸರಿ. ಆನೆ ಕಂದಕದ ಸುತ್ತಮುತ್ತ ರೈತರ ಜಮೀನುಗಳಿರುತ್ತವೆ ಎಂದರೆ ಸರಿ. ಕಂದಕದಿಂದ ಸುಮಾರು 5-6 ಮೀಟರ್ ಅಂತರದಲ್ಲಿ ರೈತರ ಜಮೀನುಗಳಿರುತ್ತವೆ. ಅದೇ ರೀತಿ ಆರೋಪಿಯ ಜಮೀನು ಕೂಡ ಕಂದಕದ ಪಕ್ಕ ಜಮೀನು ಇರುತ್ತದೆ ಎಂದರೆ ಸರಿ. ಆರೋಪಿ ತನ್ನ ಜಮೀನಿನಲ್ಲಿ ಬೆಳೆ ಬೆಳೆಯುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಕಾಡುಪ್ರಾಣಿಗಳು ರೈತರ ಜಮೀನಿಗೆ ದಾಳಿ ಮಾಡಿ ಬೆಳೆಗಳನ್ನು ಹಾಳು ಮಾಡಿದರೆ ರೈತರು ನಮ್ಮ ಕಛೇರಿಗೆ ಬಂದು ಧರಣಿ ಮಾಡುತ್ತಾರೆ ಎಂದರೆ, ಧರಣಿ ಮಾಡುವುದಿಲ್ಲ ಅರ್ಜಿ ಕೊಡುತ್ತಾರೆ. ಈ ರೀತಿ 1 ನೇ ಆರೋಪಿಯ ಜಮೀನಿನಲ್ಲಿ ಬೆಳೆದ ಬೆಳೆಯನ್ನು ಕಾಡುಪ್ರಾಣಿಗಳು ಹಾಳು ಮಾಡಿದ್ದರಿಂದ ಅವರು ನಮ್ಮ ಕಛೇರಿಗೆ ಬಂದು ಗಲಾಟೆ ಮಾಡಿರುತ್ತಾರೆ ಎಂದರೆ ಅರ್ಜಿ ನೀಡಿರುತ್ತಾರೆ. 1 ನೇ ಆರೋಪಿ ತನ್ನ ಜಮೀನಿನಲ್ಲಿ ಬೆಳೆದ ಬೆಳೆಯನ್ನು ಕಾಡುಪ್ರಾಣಿಗಳು ಹಾಳು ಮಾಡಿದ್ದರಿಂದ ನಮ್ಮ ಕಛೇರಿಗೆ ಬಂದು ಅರ್ಜಿ ನೀಡಿದ್ದರಿಂದ ಅವರಿಗೆ ತೊಂದರೆ

ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**